# ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಧರ್ಮಸಮನ್ವಯ

**ಸ್ವಾಮಿ ಭಜನಾನಂದ**

(ಹಿಂದಿನ ಸಂಚಿಕೆಯಿಂದ)

**ಹಿಂದಿನ ಸಂಚಿಕೆಯಲ್ಲಿ :** ಬಹುತ್ವ ವಾದವು, ಎಲ್ಲ ಧರ್ಮಗಳೂ ಸತ್ಯ, ಸತ್ಯಪ್ರಕಾಶನಗಳು ಬಹುವಾಗಿವೆ ಮತ್ತು ವಿವಿಧ ಧರ್ಮಗಳ ಪ್ರತಿಪಾದನೆಗಳು ವ್ಯಾಪಕ ಸತ್ಯದ ತುಣುಕುಗಳು ಎಂದು ಹೇಳುತ್ತದೆ. ಅದು ಬರಿಯ ಚಿಂತನೆಯಲ್ಲ, ಅದೊಂದು ಜೀವನ ವಿಧಾನ. ಭಗವಂತನನ್ನು ಕೇಂದ್ರವಾಗಿರಿಸಿಕೊಂಡು ವಿವಿಧ ಧರ್ಮಗಳು ಇರುತ್ತವೆ. ಬಹುತ್ವ ಮನೋಭಾವವು ಈಗ ಜನಸಮಾನ್ಯನ ಕಳಕಳಿಯಾಗಿದೆ. ಭಾರತೀಯರ ಗುಣವೈಶಿಷ್ಟ್ಯ ಮತ್ತು ಧಾರ್ಮಿಕ ಪ್ರಜ್ಞೆ – ಇವುಗಳಿಂದ ಅವರ ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಗಳು ಮೂಡಿಬಂದಿವೆ. ವಿಶ್ವಾತೀತತೆ ಮತ್ತು ಸರ್ವವ್ಯಾಪಕತೆ – ಇವೆರಡೂ ಅಂಶಗಳು ಸೇರಿ ಪರತತ್ತ್ವವಾಗುವುದು. ವಿವಿಧತೆಯಲ್ಲಿ ಏಕತೆಯ ಮನೋಭಾವವೇ ಭಾರತೀಯ ಬಹುತ್ವ ವಾದದ ಮೂಲಾಧಾರ. *(ಮುಂದೆ ಓದಿ)*

## ಭಾರತೀಯ ಸಂಪ್ರದಾಯದಲ್ಲಿ ಸಂವಾದ

ವೈದಿಕ ಯುಗವು ಕ್ರಿಸ್ತಶಕ ಎರಡನೆಯ ಶತಮಾನದ ಹೊತ್ತಿಗೆ ಅಸ್ತಂಗತವಾಯಿತು. ಅದರೊಂದಿಗೆ, **ವಿವಿಧತೆಯಲ್ಲಿ ಏಕತೆ, ಸುಸಂಯೋಜಿತ ಐಕ್ಯತೆ** ಮತ್ತು **ಭಾವಸಮನ್ವಯ** ಇವುಗಳಿಂದ ಕೂಡಿದ ವೈದಿಕ ಚಿಂತನೆಯೂ ನಷ್ಟವಾಯಿತು. ಎರಡನೆಯ ಶತಮಾನ ಅಥವಾ ಮೂರನೆಯ ಶತಮಾನದ ಹೊತ್ತಿಗೆ, ಹಲವಾರು ಸ್ವತಂತ್ರ ಚಿಂತಕರು ಭಾರತೀಯ ಚಿಂತನಾಧಾರೆಯನ್ನು ಸುವ್ಯವಸ್ಥಿತಗೊಳಿಸಲು ಯತ್ನಿಸಿದರು. ಇವರ ಫಲವಾಗಿ ಹಿಂದೂ ಚಿಂತನೆಯ ಆರು ಅಂಗಗಳು ಮೈದಳೆದವು. ಅವುಗಳನ್ನು ದರ್ಶನಗಳು ಎಂದು ಕರೆಯುತ್ತಾರೆ. ಪ್ರತಿ ದರ್ಶನವೂ ಪರಮಸತ್ಯದ ಒಂದು ನಿರ್ದಿಷ್ಟ ಭಾವನೆಯನ್ನು ಪ್ರತಿನಿಧಿಸುತ್ತದೆ.

ಆ ಆರು ದರ್ಶನಗಳು ಹೀಗಿವೆ: ಜೈಮಿನಿ ಮಹರ್ಷಿಯ **ಮೀಮಾಂಸಾ ದರ್ಶನ**, ಕಣಾದ ಮಹರ್ಷಿಯ **ವೈಶೇಷಿಕ ದರ್ಶನ**, ಗೌತಮ ಮಹರ್ಷಿಯ **ನ್ಯಾಯ ದರ್ಶನ**, ಕಪಿಲ ಮಹರ್ಷಿಯ **ಸಾಂಖ್ಯ ದರ್ಶನ**, ಪತಂಜಲಿ ಮಹರ್ಷಿಯ **ಯೋಗ ದರ್ಶನ** ಮತ್ತು ಬಾದರಾಯಣ ಮಹರ್ಷಿಯ **ವೇದಾಂತ ದರ್ಶನ**. ಮೊದಮೊದಲು ಈ ದರ್ಶನಗಳ ಅನುಯಾಯಿಗಳು ಪ್ರತ್ಯೇಕ ಗುಂಪುಗಳನ್ನು ಮಾಡಿಕೊಂಡಿದ್ದರು. ಆ ಗುಂಪುಗಳು ಆಸಕ್ತರನ್ನು ಆಕರ್ಷಿಸುತ್ತಿದ್ದವು. ಆದರೆ ಮುಂದೆ, ತಾತ್ತ್ವಿಕ ಚಿಂತನೆಯಲ್ಲಿ ಹೊಸ ಶಕೆಯೊಂದು ಆರಂಭವಾಯಿತು. ಮೀಮಾಂಸಾ ದರ್ಶನದ ಕುಮಾರಿಲ ಭಟ್ಟ, ಪ್ರಭಾಕರ ಮತ್ತು ವೇದಾಂತ ದರ್ಶನದ ಶ್ರೀಶಂಕರಾಚಾರ್ಯರು – ಇವರು ವಾಗ್ವಿವಾದಗಳ ವಿಧಾನವನ್ನು ಅನುಸರಿಸಿದರು. ಪರಮಸತ್ಯ ಮತ್ತು ಮಾನವ ವಿಧಿಗಳ ಬಗ್ಗೆ ತಮ್ಮ ಅಭಿಪ್ರಾಯವೊಂದೇ ಸತ್ಯ ಎಂದು ಸಾಧಿಸಲು ಮತ್ತು ವಿರೋಧೀ ಭಾವನೆಗಳನ್ನು ಖಂಡಿಸಲು ಅವರು ಈ ವಿಧಾನವನ್ನು ಅನುಸರಿಸಿದರು. ಶ್ರೀಶಂಕರಾಚಾರ್ಯರು ಹೀಗೆ ಅದ್ವೈತಸಂಪ್ರದಾಯದ ಪ್ರವರ್ತಕರಾಗಿದ್ದು, ವೇದಾಂತ ದರ್ಶನದೊಳಗೆ ಮತ್ತೆ ಹಲವಾರು ಸಂಪ್ರದಾಯಗಳು ಉಗಮವಾಗಲು ಪ್ರಚೋದನೆಯನ್ನು ನೀಡಿತು. ಅವುಗಳೆಂದರೆ, ದ್ವೈತ, ವಿಶಿಷ್ಟಾದ್ವೈತ ಮುಂತಾದವು. ಈ ಸಂಪ್ರದಾಯಗಳು ತತ್ತ್ವಚಿಂತನೆಯ ವಿವಿಧ ಭಾಗಗಳಷ್ಟೇ ಆಗಿ ಉಳಿಯಲಿಲ್ಲ. ಅವು ಪಂಗಡಗಳಾಗಿ ವಿಕಾಸಗೊಂಡವು. ಪ್ರತಿಯೊಂದು ಪಂಗಡವೂ ಕಾಲಾಂತರದಲ್ಲಿ, ತನ್ನದೇ ಆದ ವೈಚಾರಿಕ ಚೌಕಟ್ಟು, ದೇವಪೂಜಾಪದ್ಧತಿ, ಸಮುದಾಯ, ಆಚರಣೆಗಳು ಮತ್ತು ಪರಂಪರೆಯನ್ನು ಹೊಂದಿತು. ಹನ್ನೊಂದನೆಯ ಶತಮಾನದ ಹೊತ್ತಿಗೆ, ವೇದಾಂತವನ್ನು ಬಿಟ್ಟು ಉಳಿದೆಲ್ಲ ದಾರ್ಶನಿಕ ಪಂಗಡಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು. ವೇದಾಂತವು ತನ್ನೆಲ್ಲ ವಿಭಾಗಗಳೊಂದಿಗೆ ಭಾರತದ ಬಹುಪ್ರಭಾವಶಾಲಿ ದಾರ್ಶನಿಕ ಸಂಪ್ರದಾಯವಾಗಿ ಉಳಿದುಕೊಂಡಿತು.

ಭಾರತದ ಎಲ್ಲ ದಾರ್ಶನಿಕ ಸಂಪ್ರದಾಯಗಳು ಮತ್ತು ಪಂಗಡಗಳೂ ತಮ್ಮತಮ್ಮಲ್ಲಿ ತೀವ್ರವಾದ ವಾಗ್ವಿವಾದದಲ್ಲಿ ತೊಡಗಿದ್ದವು. ಅವು ಇಡೀ ವಿಶ್ವದಲ್ಲಿಯೆ ಅತ್ಯಂತ ಶ್ರೇಷ್ಠ ಚಿಂತಕರ ಶ್ರೇಣಿಗೆ ಸೇರಿದವರೆಂದು ಪರಿಗಣಿಸಬಹುದಾದ ವಿದ್ವಾಂಸರನ್ನು ಸೃಷ್ಟಿಸಿದವು. ಅವರು, ಪರಮಸತ್ಯ ಮತ್ತು ಮುಕ್ತಿಮಾರ್ಗಗಳ ವಿಚಾರದಲ್ಲಿ ತಮ್ಮ ಮತದ ಅಭಿಪ್ರಾಯವೇ ಸತ್ಯವಾದುದು ಎಂದು ಮಂಡಿಸಲು ಪ್ರಯತ್ನಪಟ್ಟರು. ಅದೇ ರೀತಿ ಉಳಿದ ಸಂಪ್ರದಾಯಗಳ ಮತ್ತು ಪಂಗಡಗಳ ಅಭಿಪ್ರಾಯಗಳಲ್ಲಿನ ಅಸಮಂಜತೆ ಮತ್ತು ಅಸತ್ಯತೆಗಳನ್ನು ಸಾಧಿಸಿ ತೋರಿಸಲೂ ಪ್ರಯಾಸಪಟ್ಟರು. ಈ ಬಗೆಯ ಬೌದ್ಧಿಕ ಸಮುದಾಯವು ಭಾರತದಲ್ಲೆಲ್ಲ ಹರಡಿಕೊಂಡಿತ್ತು ಹಾಗೂ ಅದಕ್ಕೆ ಸಂಸ್ಕೃತವನ್ನು ಸಂವಹನಾ ಭಾಷೆಯಾಗಿ ಉಪಯೋಗಿಸಲಾಗುತ್ತಿತ್ತು. ಈ ಕಾರಣದಿಂದಾಗಿ, ತಾತ್ತ್ವಿಕ ವಿವಾದಗಳು ರಾಷ್ಟ್ರೀಯ ಸಂವಾದದ ರೂಪವನ್ನು ತಾಳುತ್ತಿದ್ದವು. ಇದರಲ್ಲಿ, ಸಂವಾದದ ರೀತಿನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಲಾಗುತ್ತಿತ್ತು. ಪ್ರತಿ ದಾರ್ಶನಿಕ ಸಂಪ್ರದಾಯದ ವಿದ್ವಾಂಸರು ಇತರ ದರ್ಶನಗಳ ಅಭಿಪ್ರಾಯಗಳನ್ನು ಗೌರವಿಸುತ್ತಿದ್ದರು. ಅವುಗಳನ್ನು ಖಂಡಿಸುವ ಪ್ರಯತ್ನವನ್ನು ಕೈಗೊಳ್ಳುವ ಮೊದಲು, ಆಮೂಲಾಗ್ರವಾಗಿ ಅಧ್ಯಯನ ಮಾಡುತ್ತಿದ್ದರು.

ಆದರೂ, ಹಿಂದೆ ಇದ್ದ ಬಹುತ್ವ ಭಾವನೆಯು ನಷ್ಟವಾಯಿತೆಂಬುದು ಸುಸ್ಪಷ್ಟ. ಮೇಲೆ ಉದಾಹರಿಸಿದ ಕೆಲವು ದಾರ್ಶನಿಕ ಪಂಗಡಗಳು ನಿಸ್ಸಂದಿಗ್ಧವಾಗಿ ಪ್ರತ್ಯೇಕ ಭಾವನೆಯನ್ನು ವ್ಯಕ್ತಪಡಿಸುತ್ತವೆ. ಶಂಕರರ ಅದ್ವೈತ ಸಂಪ್ರದಾಯದಂತಹ ಮತ್ತೆ ಕೆಲವನ್ನು, ಹೆಚ್ಚೂಕಡಿಮೆ ಅಂತರ್ಗತ ಮನೋಭಾವವುಳ್ಳವುಗಳೆಂದು ಹೇಳಬಹುದು. ಈ ಬಗೆಯ ತಾತ್ತ್ವಿಕ ಪಂಗಡಗಳ ಹೊರತಾಗಿ, ಹಿಂದೆ ಅನೇಕ ಮತಗಳೂ ಇದ್ದವು. ಹೀಗಿದ್ದರೂ ಸಹಿಷ್ಣುತೆ, ಸಮನ್ವಯ ಮತ್ತು ಅಹಿಂಸೆಯ ಭಾವನೆ ಭಾರತೀಯ ಗುಣವೈಶಿಷ್ಟ್ಯದಲ್ಲಿ ಮನೆಮಾಡಿಕೊಂಡಿತ್ತು. ಆದ್ದರಿಂದ ಆ ಎಲ್ಲ ಮತಗಳು ಹಿಂಸಾತ್ಮಕ ಘರ್ಷಣೆ ಮತ್ತು ಮತೀಯ ಗಲಭೆಗಳಿಂದ ಮುಕ್ತವಾಗಿ, ಒಟ್ಟಿಗೆ ಇದ್ದವು. ದಾರ್ಶನಿಕ ಪಂಗಡಗಳು ಮತ್ತು ಧಾರ್ಮಿಕ ಮತಗಳ ಈ ಸಮಗ್ರ ಸಾಮಾಜಿಕ ಸ್ವರೂಪಕ್ಕೆ ೧೧ ನೆಯ ಶತಮಾನದಿಂದ ಹಿಡಿದು ೧೮ ನೆಯ ಶತಮಾನದವರೆಗೆ ನಡೆದ ವಿದೇಶೀ ಧಾಳಿಗಳಿಂದ ಧಕ್ಕೆ ಬಂತು. ಅದರ ಅಂತಿಮ ಪರಿಣಾಮವಾಗಿ ಭಾರತವು ಪಾಶ್ಚಾತ್ಯ ಶಕ್ತಿಗಳ ಅಧೀನಕ್ಕೊಳಗಾಯಿತು.

೧೯ ನೆಯ ಶತಮಾನದ ಹೊತ್ತಿಗೆ ಪರಿಸ್ಥಿತಿ ಮತ್ತೂ ಹದಗೆಟ್ಟಿತು. ಆಗ ಭಾರತೀಯ ಸಂಸ್ಕೃತಿಯು ಪಾಶ್ಚಾತ್ಯ ಸಂಸ್ಕೃತಿಯ ಸವಾಲನ್ನು ಎದುರಿಸಬೇಕಾಯಿತು. ಭಾರತೀಯ ಸಮಾಜವು ಮೊದಮೊದಲು

ಈ ಸವಾಲನ್ನು ಎದುರಿಸಿದ್ದು, ಸಮಾಜ ಸುಧಾರಣಾ ಆಂದೋಲನಗಳನ್ನು ಹುಟ್ಟುಹಾಕುವ ಮೂಲಕ. ಅವುಗಳಲ್ಲಿ ಕೆಲವು ಭಾರತದ ಅಮೂಲ್ಯ ಆಧ್ಯಾತ್ಮಿಕ ಪರಂಪರೆಗೇ ಘಾತಕಗಳಾಗಿದ್ದವು.

ಈ ಸಂದಿಗ್ಧ ಘಟ್ಟದಲ್ಲಿ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಅವತೀರ್ಣವಾಯಿತು. "ಮೂವತ್ತು ಕೋಟಿ ಜನರ ಎರಡು ಸಾವಿರ ವರ್ಷಗಳ ಆಧ್ಯಾತ್ಮಿಕ ಜೀವನದ ಪರಿಪೂರ್ಣತೆಯೇ ಮೂರ್ತಿವೆತ್ತವರು" ಎಂದು ಫ್ರೆಂಚ್ ವಿದ್ವಾಂಸ ರೊಮ ರೋಲಾ ಶ್ರೀರಾಮಕೃಷ್ಣರನ್ನು ಬಣ್ಣಿಸುತ್ತಾರೆ. ವಿವೇಕಾನಂದರನ್ನು ಕುರಿತ ಅವರ ಇನ್ನೊಂದು ಹೇಳಿಕೆ ಕೂಡ ಇಷ್ಟೇ ಸೂಕ್ಷ್ಮಗ್ರಾಹಿಯಾದದ್ದು: " ಸ್ವಾಮಿ ವಿವೇಕಾನಂದರ ರಚನಾತ್ಮಕ ಪ್ರತಿಭೆಯನ್ನು ಎರಡು ಪದಗಳಲ್ಲಿ ಹಿಡಿದಿಡಬಹುದು. ಅದೆಂದರೆ. **ಸಮತೋಲನ ಮತ್ತು ಸುಸಂಯೋಜನೆ** (equilibrium and synthesis)." [೬] ಪರಮೋಚ್ಚ ಸತ್ಯದ ಬಗೆಗೆ ಸಮಗ್ರ ದೃಷ್ಟಿಕೋನ, ಜೀವನದ ಬಗ್ಗೆ ಸರ್ವಾಂಗೀಣ ಮನೋಭಾವ, ಸಾಮಾಜಿಕ ವಾಸ್ತವಿಕತೆಗಳನ್ನು ಬಹುತ್ವ ದೃಷ್ಟಿಯಿಂದ ಮಾನ್ಯ ಮಾಡುವುದು– ಇವುಗಳನ್ನು ಆಗಿನ ಭಾರತವು ಕಳೆದುಕೊಂಡಿತ್ತು. ಅವನ್ನು ಮತ್ತೆ ಪುನರುಜ್ಜೀವನಗೊಳಿಸಿದ್ದೇ ಶ್ರೀರಾಮಕೃಷ್ಣ ಮತ್ತು ವಿವೇಕಾನಂದರು ಮಾಡಿದ ಮಹಾನ್ ಕಾರ್ಯವಾಗಿದೆ.

**ಆಧುನಿಕ ಜಗತ್ತಿನಲ್ಲಿ ಧಾರ್ಮಿಕ ಬಹುತ್ವ ಭಾವನೆಯನ್ನು ಪ್ರತಿಪಾದಿಸಿದ ಮೊಟ್ಟಮೊದಲ ಮಹಾನ್ ಪ್ರವಾದಿಯೆಂದರೆ, ಶ್ರೀರಾಮಕೃಷ್ಣ ಪರಮಹಂಸರು. ಆದರೆ, ಅವರು ಪ್ರತಿಪಾದಿಸಿದ ಬಹುತ್ವ ಭಾವನೆ, ಸಮಗ್ರ ದೃಷ್ಟಿಯ ಭಾರತೀಯ ಮಾದರಿಯದಾಗಿತ್ತೇ (model) ಹೊರತು, ವಿಶ್ಲೇಷಣಾತ್ಮಕವಾದ ಪಾಶ್ಚಾತ್ಯ ಮಾದರಿಯದಾಗಿರಲಿಲ್ಲ. ಧರ್ಮಸಮನ್ವಯದ ಭಾರತೀಯ ಭಾವನೆಯನ್ನು ಆಧುನಿಕ ಸಮಾಜದ ಆವಶ್ಯಕತೆಗಳಿಗೆ ಅನುಸಾರವಾಗಿ, ಪುನಃಸಂಸ್ಥಾಪಿಸಿದ್ದು ಶ್ರೀರಾಮಕೃಷ್ಣರು ತಮ್ಮ ಜೀವಿತದಲ್ಲಿ ಸಾಧಿಸಿದ ಪ್ರಮುಖ ಕಾರ್ಯ.**

## ವಿಶ್ವಾತ್ಮಕತೆ

ನಾವು ಇದುವರೆಗೂ ಮೂರು ಅಂತರಧರ್ಮೀಯ ಮನೋಭಾವನೆಗಳ ಬಗ್ಗೆ ಚರ್ಚಿಸಿದೆವು. ಅವೆಂದರೆ, ಪ್ರತ್ಯೇಕತಾ ವಾದ, ಅಂತರ್ಗತ ವಾದ ಮತ್ತು ಬಹುತ್ವ ವಾದ. ಈಗ ನಾವು ನಾಲ್ಕನೆಯದನ್ನು ನೋಡಲಿದ್ದೇವೆ. ಅದೇ ವಿಶ್ವಾತ್ಮಕತೆ(universalism). **ವಿಶ್ವಾತ್ಮಕತೆಯೆಂದರೆ, ಎಲ್ಲ ಧರ್ಮಗಳಿಗೂ ಸಮಾನವಾದ ಅಥವಾ ಎಲ್ಲ ಧರ್ಮಗಳನ್ನೂ ಒಂದುಗೂಡಿಸುವ, ವಿಶ್ವವ್ಯಾಪಕವಾಗಿ ಸಮಂಜಸವಾಗಬಲ್ಲ ಧಾರ್ಮಿಕ ತತ್ತ್ವಗಳಿವೆ ಎಂಬ ಧೋರಣೆ.** ಬಹುತ್ವ ವಾದವು ಧರ್ಮಗಳ ನಡುವಣ ಭೇದಗಳಿಗೆ ಒತ್ತುಕೊಡುತ್ತದೆ. ಆದರೆ ವಿಶ್ವಾತ್ಮಕತೆಯು ಧರ್ಮಗಳ ನಡುವಣ ಸಮಾನಭೂಮಿಕೆಗೆ ಒತ್ತುಕೊಡುತ್ತದೆ.

ಬಹುತ್ವ ವಾದಕ್ಕೆ ಅಡಿಪಾಯವನ್ನಿಟ್ಟವರು ಶ್ರೀರಾಮಕೃಷ್ಣರು. ಇದು ಆಧುನಿಕ ಜಗತ್ತಿಗೆ ಅವರ ಅತ್ಯಂತ ಮಹತ್ವದ ಕೊಡುಗೆಗಳಲ್ಲಿ ಒಂದು. ಸ್ವಾಮಿ ವಿವೇಕಾನಂದರು ಬಹುತ್ವ ಮನೋಭಾವನೆಯನ್ನು ಮತ್ತೂ ಒಂದು ಹೆಜ್ಜೆ ಮುಂದಕ್ಕೆ ಕರೆದೊಯ್ದರು. ಬಹುತ್ವ ವಾದವು ವಿಶ್ವಾತ್ಮಕತೆಯಲ್ಲಿ ಪರ್ಯವಸಾನಗೊಳ್ಳುವುದೆಂದು ಅವರು ತೋರಿಸಿಕೊಟ್ಟರು. ಆಧುನಿಕ ಜಗತ್ತಿಗೆ ಸ್ವಾಮಿ ವಿವೇಕಾನಂದರ ಕೊಡುಗೆ ವಿಶ್ವಾತ್ಮಕತೆ. ಆದರೆ ಇದು ಬಹಳ ಅಪಾರ್ಥಕ್ಕೆ ಎಡೆಮಾಡಿಕೊಟ್ಟಿರುವ ಶಬ್ದವಾಗಿಬಿಟ್ಟಿದೆ. ಈ ವಿಷಯವನ್ನು ಪ್ರತ್ಯೇಕವಾಗಿ ನೋಡುತ್ತೇವೆ.

## ಶ್ರೀರಾಮಕೃಷ್ಣರ ಧರ್ಮಸಮನ್ವಯ ಸಿದ್ಧಾಂತ

ಮೊದಲೇ ಹೇಳಿದಂತೆ, ಶ್ರೀರಾಮಕೃಷ್ಣರ ಧರ್ಮಸಮನ್ವಯ ಸಿದ್ಧಾಂತವು ಧಾರ್ಮಿಕಬಹುತ್ವ ಮನೋಭಾವನೆಯ ಭಾರತೀಯ ಅವತರಣಿಕೆಯಾಗಿದೆ. ಪ್ರಾಚೀನ ಭಾರತದ ಜನರಲ್ಲಿ, ಈ ಬಗೆಯ ಬಹುತ್ವ ಮನೋಭಾವವು ಸರ್ವೇಸಾಮಾನ್ಯವಾಗಿತ್ತು ಮತ್ತು ಅದು ಒಂದು ನಿರ್ದಿಷ್ಟ ಧಾರ್ಮಿಕ ದೃಷ್ಟಿಯೂ ಆಗಿತ್ತು. ಮಧ್ಯಕಾಲೀನ ಯುಗದಲ್ಲಿ ಮತ್ತು ನಂತರದ ಶತಮಾನಗಳಲ್ಲಿ ಈ ಬಹುತ್ವ ದೃಷ್ಟಿಗೆ ಗ್ರಹಣ ಹಿಡಿಯಿತು. ಅದಕ್ಕೆ ಕಾರಣ, ದಾರ್ಶನಿಕ ಸಂಪ್ರದಾಯಗಳು ಮತ್ತು ಧಾರ್ಮಿಕ ಪಂಗಡಗಳ ಉಗಮ.[೭] ಸುಪ್ತವಾಗಿದ್ದ ಈ ಪ್ರಾಚೀನ ಭಾವನೆಗೆ ಜೀವ ತುಂಬಿ ಮತ್ತೆ ಆಧುನಿಕ ಕಾಲದ ಜನರಲ್ಲಿ ಅದನ್ನು ಸ್ಥಾಪಿಸಿದವರು ಶ್ರೀರಾಮಕೃಷ್ಣರು.

ಶ್ರೀರಾಮಕೃಷ್ಣರ ಧರ್ಮಸಮನ್ವಯ ಸಿದ್ಧಾಂತವು ಅವರು ತಮ್ಮ ಜೀವನದಲ್ಲಿ ಅನುಸರಿಸಿದ ಕೆಲವು ನಿರ್ದಿಷ್ಟ ಸಾಮಾನ್ಯ ನಿಯಮಗಳ ಮೇಲೆ ಆಧಾರಿತವಾಗಿದೆ. **ಶ್ರೀರಾಮಕೃಷ್ಣರ ಧರ್ಮಸಮನ್ವಯ ಸಿದ್ಧಾಂತವು ಪುಸ್ತಕಗಳ ಅಥವಾ ಬೌದ್ಧಿಕ ವಿಚಾರದ ಫಲವಲ್ಲ, ಅವರೇ ಸ್ವಂತವಾಗಿ ಅನುಭವಿಸಿದ ಅಪರೋಕ್ಷಾನುಭೂತಿಯಿಂದ ಒಡಮೂಡಿದ್ದು ಅದು.** ಇದು ಮೊದಲನೆಯ ಸಾಮಾನ್ಯ ನಿಯಮ. ಅವರ ಪಾಲಿಗೆ, ಧರ್ಮ ಎಂದರೆ, ನೇರ ಅನುಭಾವವಾಗಿತ್ತೇ ಹೊರತು, ಆಚರಣೆಗಳಾಗಲಿ ಗೊಡ್ಡುನಂಬಿಕೆಗಳಾಗಲಿ ಆಗಿರಲಿಲ್ಲ. ಪ್ರತಿಯೊಬ್ಬನೂ ಅವನವನ ಧರ್ಮವನ್ನು ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಅನುಸರಿಸಿದರೆ, ನೇರವಾದ ಆಧ್ಯಾತ್ಮಿಕ ಅನುಭಾವವನ್ನು ಪಡೆದುಕೊಳ್ಳುತ್ತಾನೆ ಎಂದು ಅವರು ನಂಬಿದ್ದರು. ಅದಲ್ಲದೆ, ಪ್ರತಿಯೊಬ್ಬರೂ ತಮ್ಮ ಸ್ವಂತ ಧರ್ಮವನ್ನು ಪರಿಪಾಲಿಸಿ, ಅದು ಆಶ್ವಾಸನೆ ಕೊಡುವ ಪರಮಾರ್ಥವನ್ನು ಪಡೆದುಕೊಳ್ಳಬೇಕು ಎಂದು ಅವರು ಇಚ್ಛಿಸಿದ್ದರು. ಶ್ರೀರಾಮಕೃಷ್ಣರ ಪ್ರಕಾರ ಧರ್ಮಸಮನ್ವಯವೆಂದರೆ ಇದೇ.

ಶ್ರೀರಾಮಕೃಷ್ಣರು ಅನುಸರಿಸಿದ ಎರಡನೆಯ ಸಾಮಾನ್ಯ ನಿಯಮ ಇದು: **ಪ್ರತಿಯೊಂದು ಧರ್ಮವನ್ನೂ ಅದರ ಅನುಯಾಯಿಗಳ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳುವುದು.** ತಾವು ಹುಟ್ಟಿದ ಧಾರ್ಮಿಕ ಕಟ್ಟಳೆಯ ಮಾನದಂಡದಿಂದ ಇತರ ಧರ್ಮಗಳನ್ನು ಅವರೆಂದೂ ಅಳೆಯಲಿಲ್ಲ. ತಮ್ಮ ನಿರ್ಣಯವನ್ನು ಬದಿಗೊತ್ತಿ, ಎಲ್ಲ ಧರ್ಮಗಳನ್ನೂ ಆಯಾ ಧರ್ಮಗಳ ಅನುಯಾಯಿಗಳು ಕಂಡಂತೆ ಕಾಣುವ ಮನೋಭಾವವನ್ನು ದೃಶ್ಯತತ್ತ್ವಸಿದ್ಧಾಂತ ವಿಧಾನ (phenomenological method) ಎಂದು ಆಧುನಿಕ ಕಾಲದಲ್ಲಿ ಕರೆಯುತ್ತಾರೆ. ಹಾಗೆಂದು ಶ್ರೀರಾಮಕೃಷ್ಣರು ಈ ವಿಧಾನವನ್ನು ಅನುಸರಿಸಿದರೆಂದು ಇದರ ಅರ್ಥವಲ್ಲ. ಅದಕ್ಕೆ ಬದಲಾಗಿ, ಈ ವಿಧಾನವು ಶ್ರೀರಾಮಕೃಷ್ಣರು ಸಾಧಿಸಿದ್ದರ ಅಣಕವಂತೆ ತೋರುವುದು. (*ಶ್ರೀರಾಮಕೃಷ್ಣರು ಈ ವಿಧಾನಕ್ಕಿಂತಲೂ ಅತಿ ಉನ್ನತ ಧ್ಯೇಯೋದ್ದೇಶವುಳ್ಳ ಅಪರಿಮಿತ ಮಹಿಮಾನ್ವಿತ ಬಾಳುವೆಯನ್ನು ಬಾಳಿದರು ಎಂದರ್ಥ –ಸಂ.*) ಶ್ರೀರಾಮಕೃಷ್ಣರು ದೃಶ್ಯತತ್ತ್ವಸಿದ್ಧಾಂತಕ್ಕೆ ಅಧಿಕೃತ ಮೊಹರನ್ನು ಒತ್ತಿದರಷ್ಟೆ. ವಿಪರ್ಯಾಸವೋ ಎಂಬಂತೆ, ಪಾಶ್ಚಾತ್ಯ ವಿದ್ವಾಂಸರು ತಮ್ಮ ವೈಯಕ್ತಿಕ ಜೀವನದಲ್ಲಿ ಇದನ್ನು ಅನುಸರಿಸಿದ ನಿದರ್ಶನಗಳು ವಿರಳ.[೮]

ಶ್ರೀರಾಮಕೃಷ್ಣರು ತಮ್ಮ ಬಾಳಿನ ಉದ್ದಕ್ಕೂ ಪಾಲಿಸಿದ ಮೂರನೆಯ ಸಾಮಾನ್ಯ ನಿಯಮವೆಂದರೆ, **ಯಾವ ಧರ್ಮ ಅಥವಾ ಪಂಗಡವನ್ನೂ ಟೀಕಿಸದೆ ಇದ್ದುದು** (ಹಾಗೆ ನೋಡಿದರೆ, ಅವರು ಯಾರನ್ನೂ ದೂಷಿಸ

ಲಿಲ್ಲ. ಅವಕ್ಕೆ ಕಾರಣ, ಪಾಪಿಷ್ಠನಿಗೂ ಒಂದು ಭರವಸೆಯಿದೆ ಎಂದು ಅವರು ನಂಬಿದ್ದರು). ಶ್ರೀರಾಮಕೃಷ್ಣರು ಭಗವಚ್ಛಕ್ತಿಯು ಎತ್ತೆತ್ತಲೂ ಕಾರ್ಯವೆಸಗುವುದನ್ನು ಕಾಣುತ್ತಿದ್ದರು. ಭಗವಂತನ ಲೀಲೆಯಲ್ಲಿ ಪ್ರತಿಯೊಂದು ಧರ್ಮಕ್ಕೂ, ಪ್ರತಿಯೊಂದು ಪಂಗಡಕ್ಕೂ ಒಂದು ನಿರ್ದಿಷ್ಟ ಸ್ಥಾನವಿರುವುದೆಂದು ನಂಬಿದ್ದರು. ಬೇರೆ ರೀತಿಯಲ್ಲಿ ಹೇಳುವುದಾದರೆ, ಧರ್ಮಸಮನ್ವಯವೆಂಬುದು ಅವರಲ್ಲಿ ಅತ್ಯಂತ ಸಹಜ ಪ್ರಕ್ರಿಯೆಯಾಗಿದ್ದಿತು, ಮತವಾದದ ಘೋಷಣೆಗಳಿಂದಾಗುವ ಕೃತಕ ಸೃಷ್ಟಿಯಾಗಿರಲಿಲ್ಲ. ಸಾಂಪ್ರದಾಯಿಕ ಹಿಂದೂ ಕುಟುಂಬದಲ್ಲಿ ಹುಟ್ಟಿ ಬೆಳೆದವರಾಗಿದ್ದರೂ, ಬ್ರಹ್ಮಸಮಾಜದವರು, ವೈಷ್ಣವರು, ಕ್ರೈಸ್ತರು, ಮುಸಲ್ಮಾನರು ಮತ್ತು ಸಿಖ್ಖರು – ಇವರೆಲ್ಲರ ನಡುವೆ ಅವರು ಒಂದಾಗಿ ಬೆರೆತು ಇರುತ್ತಿದ್ದರು.

ಶ್ರೀರಾಮಕೃಷ್ಣರ ಧರ್ಮಸಮನ್ವಯ ಸಿದ್ಧಾಂತದ ಪ್ರಮುಖ ಅಂಶಗಳನ್ನು ಇಲ್ಲಿ ಕೊಡಲಾಗಿದೆ:

**೧. ಪರಮಸತ್ಯವು ಒಂದೇ ಆಗಿದೆ. ಆದರೆ, ಅದು ವಿವಿಧ ಧರ್ಮಗಳಲ್ಲಿ ವಿವಿಧ ಹೆಸರುಗಳನ್ನು ಪಡೆದಿದೆ. ಅದು ಸಗುಣವೂ ಹೌದು, ನಿರ್ಗುಣವೂ ಹೌದು.**

**೨. ಪರಮಸತ್ಯದ ಸಾಕ್ಷಾತ್ಕಾರವೇ ಮಾನವ ಜೀವನದ ನೈಜ ಧ್ಯೇಯ ಮತ್ತು ಉದ್ದೇಶ. ಇದೇ ಎಲ್ಲ ಧರ್ಮಗಳ ಸರ್ವೋಚ್ಚ ಉದ್ದೇಶವೂ ಆಗಿದೆ. ಈ ಬಗೆಯ ಅಪರೋಕ್ಷ ಇಂದ್ರಿಯಾತೀತ ಅನುಭಾವ ಮಾತ್ರವೇ ಧರ್ಮಗಳಿಗೆ ಅಧಿಕೃತತೆಯನ್ನು ನೀಡಬಲ್ಲದೇ ಹೊರತು, ಧರ್ಮಗ್ರಂಥಗಳಲ್ಲ.**

**೩. ಪರಮಸತ್ಯದ ಸಾಕ್ಷಾತ್ಕಾರಕ್ಕೆ ಹಲವು ಪಥಗಳಿವೆ. ಪ್ರತಿಯೊಂದು ಧರ್ಮವೂ ಅಂತಹ ಒಂದು ಪಥವಾಗಿದೆ. *ಯತೋ ಮತ್ ತತೋ ಪಥ್* – ಮತಗಳೆಷ್ಟೋ, ಅಷ್ಟು ಪಥಗಳು. ಸಮಾನವಾದ ಪರಮ ಗುರಿಯತ್ತ ಸಾಗುವ ಮಾರ್ಗಗಳಾಗಿರುವುದರಿಂದ, ಎಲ್ಲ ವಿಶ್ವ ಧರ್ಮಗಳೂ ಸಮಂಜಸವಷ್ಟೇ ಅಲ್ಲ, ನೈಜವಾದವುಗಳು ಕೂಡ.**

**೪. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ತಾನು ಆರಿಸಿಕೊಂಡ ಮಾರ್ಗದಲ್ಲಿ ನಿಷ್ಠಾವಂತನಾಗಿರಬೇಕು. ಅವನಲ್ಲಿ ಇಷ್ಟನಿಷ್ಠೆಯ ಭಾವನೆ ಇರಬೇಕು. ಆದರೆ, ತನ್ನ ಮಾರ್ಗವೊಂದೇ ನಿಜ ಮತ್ತು ಪರಿಪೂರ್ಣ ಎಂದು ಅವನು ಎಂದೂ ಭಾವಿಸಬಾರದು.**

**೫. ಇನ್ನೂ ಮುಂದೆ ಹೋಗಿ, ಒಬ್ಬನು ಎಲ್ಲ ಧರ್ಮಗಳ ಪ್ರವರ್ತಕರಲ್ಲಿ, ಅವರೆಲ್ಲರೂ ಭಗವಂತನ ಅಭಿವ್ಯಕ್ತರೂಪರೆಂದು ತಿಳಿದು ಗೌರವವನ್ನು ತೋರಬೇಕು. ಭಗವಂತನು ಎಲ್ಲ ಜನರಲ್ಲಿ ನೆಲೆಸಿದ್ದಾನೆ; ಜಾತಿ ಮತ ಜನಾಂಗಗಳ ಭೇದವಿಲ್ಲದೆ ಅವನ ಸೇವೆ ಮಾಡಬೇಕು ಎಂಬ ಪರಿಜ್ಞಾನ ಇರಬೇಕು.**

ಮೇಲಿನ ಐದು ಅಂಶಗಳು ಶ್ರೀರಾಮಕೃಷ್ಣರ ಧರ್ಮಸಮನ್ವಯ ಸಿದ್ಧಾಂತದ ಸಾರಭೂತ ತತ್ತ್ವಗಳಾಗಿವೆ. ಅವುಗಳ ಮಹತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಅವುಗಳನ್ನು ನಾವು ಕೆಳಗೆ ಚರ್ಚಿಸಿದ್ದೇವೆ:

೧. ಪರಮಸತ್ಯದ ಬಗೆಗಿನ ಮೊದಲನೆಯ ಅಂಶವನ್ನು ಈಗ ನೋಡೋಣ. ಶ್ರೀರಾಮಕೃಷ್ಣರು ಒತ್ತಿಹೇಳುತ್ತಿದ್ದ ಒಂದು ವಿಷಯವೆಂದರೆ, ಭಗವಂತನಿಗೆ ಯಾವ ಸೀಮಿತತೆಗಳನ್ನೂ ಒಡ್ಡಬಾರದು ಎಂಬುದು. ಭಗವಂತನನ್ನು ಸಂಪೂರ್ಣವಾಗಿ ತಿಳಿಯಲಾಗದು; ಅವನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು; ಆದರೆ ಮಾನವ ಮನಸ್ಸು ಅಚಿಂತ್ಯವೂ ಅವ್ಯಯವೂ ಆದ ಭಗವದ್ರಹಸ್ಯವನ್ನು ಪೂರ್ಣಪ್ರಮಾಣದಲ್ಲಿ ಗ್ರಹಿಸಲಾಗದು. ಶ್ರೀರಾಮಕೃಷ್ಣರು ಹೇಳುತ್ತಾರೆ: "ಬ್ರಹ್ಮನನ್ನು ಸಂಪೂರ್ಣವಾಗಿ ತಿಳಿದುಬಿಟ್ಟದ್ದೇವೆಂದು ಜನರು ಬಗೆಯುತ್ತಾರೆ. ಒಮ್ಮೆ ಇರುವೆಯೊಂದು ಸಕ್ಕರೆಯ ಬೆಟ್ಟಕ್ಕೆ ಹೋಯಿತು. ಸಕ್ಕರೆಯ ಒಂದು ಕಣ ಅದರ ಹೊಟ್ಟೆಯನ್ನು ತುಂಬಿತು. ಅದು ಬಾಯಲ್ಲಿ ಇನ್ನೊಂದು ಕಣವನ್ನು ಕಚ್ಚಿಕೊಂಡು, ಮನೆಯತ್ತ ನಡೆಯಲಾರಂಭಿಸಿತು. ದಾರಿಯಲ್ಲಿ ಅದು ಆಲೋಚಿಸಿತು 'ಇನ್ನೊಮ್ಮೆ ನಾನು ಬರುವೆ. ಆಗ ಇಡೀ ಬೆಟ್ಟವನ್ನೇ ಕೊಂಡೊಯ್ಯುವೆ.' ಶುಕದೇವ ಮತ್ತು ಅವನ ರೀತಿಯ ಇತರ ಋಷಿಗಳು, ದೊಡ್ಡ ಇರುವೆಗಳಿದ್ದಂತೆ ಅಷ್ಟೆ."

ಬ್ರಹ್ಮದ ನಿಜಸ್ವರೂಪವನ್ನು ಮಾತುಗಳಲ್ಲಿ ಬಣ್ಣಿಸಲಾಗದು ಅನ್ನುವುದು ಶ್ರೀರಾಮಕೃಷ್ಣರ ಅಭಿಪ್ರಾಯ. ಅವರು ಹೇಳುತ್ತಿದ್ದರು: "ಬ್ರಹ್ಮವೆಂಬುದೇನು ಎನ್ನುವುದನ್ನು ವರ್ಣಿಸಲಾಗದು. ಈ ಜಗತ್ತಿನಲ್ಲಿರುವ ಎಲ್ಲ ಸಂಗತಿಗಳು – ವೇದಗಳು, ಪುರಾಣಗಳು, ತಂತ್ರಗಳು, ಆರು ದರ್ಶನಗಳು – ಇವೆಲ್ಲ ಎಂಜಲಾಗಿವೆ. ನಾವು ತಿನ್ನುವ ಆಹಾರ ನಾಲಗೆಯ ಸ್ಪರ್ಶದಿಂದ ಎಂಜಲಾಗುತ್ತದೆ. ಅದೇ ರೀತಿ ಇವುಗಳೆಲ್ಲ, ನಾಲಗೆಯಿಂದ ಓದಿಯೋ, ಮಾತನಾಡಿಯೋ ಎಂಜಲಾಗಿಬಿಟ್ಟಿವೆ. ಈ ರೀತಿ ಎಂಜಲಾಗದ ಒಂದೇ ಒಂದು ವಸ್ತು ಇದೆ. ಅದೇ ಬ್ರಹ್ಮ."

ಶ್ರೀರಾಮಕೃಷ್ಣರು ಪರಮಸತ್ಯವು ಸಾಕಾರವೂ ಹೌದು, ನಿರಾಕಾರವೂ ಹೌದು; ವಿವಿಧ ಧರ್ಮಗಳಲ್ಲಿ ಅದನ್ನು ವಿವಿಧ ಹೆಸರುಗಳಲ್ಲಿ ಕರೆಯುತ್ತಾರೆ ಎಂದು ಕೂಡ ನಂಬಿದ್ದರು. ನೀರು, ಹಿಮವಾಗಿ ಘನೀಭೂತವಾಗುವುದು. ಅದೇ ರೀತಿ ಭಕ್ತನ ಭಕ್ತಿಯ ಶೈತ್ಯದಿಂದ, ನಿರ್ಗುಣ ತತ್ತ್ವ ಸಗುಣವಾದಂತೆ ತೋರುವುದು. "ಸತ್ಯ ಒಂದು ಮತ್ತು ಎಲ್ಲರಿಗೂ ಸಮಾನ. ವೈವಿಧ್ಯವಿರುವುದು ನಾಮ ಮತ್ತು ರೂಪಗಳಲ್ಲಿ ಮಾತ್ರ. ಒಂದು ಕೊಳದಲ್ಲಿ ಮೂರುನಾಲ್ಕು ಘಟ್ಟಗಳಿರುತ್ತವೆ. ಒಂದೆಡೆಯಲ್ಲಿ, ಹಿಂದುಗಳು ನೀರು ಕುಡಿದು, ಅದನ್ನು 'ಜಲ' ಎನ್ನುತ್ತಾರೆ. ಮುಸಲ್ಮಾನರು ಇನ್ನೊಂದೆಡೆ ನೀರು ಕುಡಿದು ಅದನ್ನು 'ಪಾನಿ' ಎನ್ನುತ್ತಾರೆ. ಇಂಗ್ಲೀಷಿನವರು ಮೂರನೆಯ ಘಟ್ಟದಲ್ಲಿ ನೀರು ಕುಡಿದು, ಅದನ್ನು 'ವಾಟರ್' ಎನ್ನುತ್ತಾರೆ. ಈ ಮೂರೂ ಪದಗಳು ಒಂದೇ ನೀರನ್ನು, ಎಲ್ಲರೂ ಸಮಾನವಾಗಿ ಕುಡಿದ ನೀರನ್ನು ಸೂಚಿಸುತ್ತದೆ. ಅದೇ ರೀತಿ, ಸತ್ಯವನ್ನು ಕೆಲವರು 'ಅಲ್ಲಾಹ' ಎಂದು ಕರೆಯುತ್ತಾರೆ. ಕೆಲವರು 'ಗಾಡ್' ಎಂದು ಕರೆಯುತ್ತಾರೆ. ಮತ್ತೆ ಕೆಲವರು ಬ್ರಹ್ಮ, ಇನ್ನು ಕೆಲವರು ಕಾಳಿ, ಮತ್ತಿತರರು ರಾಮ, ಏಸು, ದುರ್ಗಾ, ಹರಿ – ಮುಂತಾದ ಹಲವು ಹೆಸರುಗಳಿಂದ ಕರೆಯುತ್ತಾರೆ. ಭಗವಂತನೊಬ್ಬನೇ ಆದರೆ, ಅವನ ನಾಮಧೇಯಗಳು ಮಾತ್ರ ಅನೇಕ."

೨. ಈಗ ಶ್ರೀರಾಮಕೃಷ್ಣರ ಧರ್ಮಸಮನ್ವಯ ಸಿದ್ಧಾಂತದ ಎರಡನೆಯ ಅಂಶವನ್ನು ನೋಡೋಣ. **ಭಗವತ್ಸಾಕ್ಷಾತ್ಕಾರವೇ ಧರ್ಮದ ಸಾರಭೂತ ತಿರುಳು ಎನ್ನುವುದೇ ಅದು.** ಜೀವನದ ಪರಮ ಗುರಿ ಭಗವಂತನ ಕಡೆ ಮತ್ತೆ ಹೋಗುವುದೆಂದೇ ಎಲ್ಲ ಧರ್ಮಗಳಲ್ಲೂ ನಂಬಲಾಗಿದೆ. ಭಾರತದಲ್ಲಿ ಉಗಮಗೊಂಡ ಅನುಭಾವಿಕ ಧರ್ಮಗಳಲ್ಲಿ, ಅನುಭಾವಿಕ ಅನುಭವದ ಮೂಲಕ ಭಗವತ್ಸಾಕ್ಷಾತ್ಕಾರವು ವರ್ತಮಾನ ಜೀವನಾವಧಿಯಲ್ಲಿಯೇ ಸಾಧ್ಯವೆಂದು ಪರಿಗಣಿಸಲಾಗಿದೆ. ಇನ್ನಿತರ ಧರ್ಮಗಳಲ್ಲಿಯೂ, ಅದು ಮರಣಾನಂತರ ಸಂಭವಿಸುವುದೆಂಬ

ನಿರೀಕ್ಷೆಯನ್ನು ಕಾಣುತ್ತೇವೆ. ಈ ಬಗೆಯ ಭಗವದನುಭವವು ಧರ್ಮ ಸಾಮರಸ್ಯವನ್ನು ಸಂಸ್ಥಾಪಿಸಲು ಬೇಕಾದ ಕೇಂದ್ರ ತತ್ತ್ವವಾಗಬಲ್ಲುದು. ಆಚರಣೆಗಳು, ಪುರಾಣಗಳು, ಕಟ್ಟಳೆಗಳು ಇವೆಲ್ಲ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಬೇರೆಬೇರೆಯಾಗುತ್ತವೆ. ಅವುಗಳು ಧರ್ಮದ ಅಮುಖ್ಯ ಅಂಶಗಳು ಎಂದು ಶ್ರೀರಾಮಕೃಷ್ಣರು ಪರಿಗಣಿಸುತ್ತಾರೆ. ಈ ವಿಷಯದಲ್ಲಿ ಅವರು ಹೀಗೆ ಹೇಳುತ್ತಿದ್ದರು: "ನೀವು ಮಾವಿನ ತೋಪಿಗೆ ಹೋದಾಗ, ನಿಮ್ಮ ಪ್ರಥಮ ಆದ್ಯತೆ ಮಾವಿನ ಹಣ್ಣುಗಳನ್ನು ತಿನ್ನುವುದರಲ್ಲಿ ಇರಬೇಕೇ ಹೊರತು, ಮರದ ಎಲೆಗಳನ್ನು ಎಣಿಸುವುದರಲ್ಲಲ್ಲ. ಹಾಗೆಯೇ, ಧರ್ಮದ ಪ್ರಾಥಮಿಕ ಉದ್ದೇಶ ಭಗವದನುಭವವನ್ನು ಪಡೆದುಕೊಂಡು, ಭಗವದಾನಂದವನ್ನು ಸವಿಯುವುದೇ ಆಗಿದೆ."

೩. ಶ್ರೀರಾಮಕೃಷ್ಣರ ಮೂರನೆಯ ಬೋಧನೆ ಇದು: **ಪರಮಸತ್ಯವು ಒಂದೇ ಆದರೂ ಅದನ್ನು ಹಲವು ಮಾರ್ಗಗಳ ಮೂಲಕ ಸೇರಬಹುದು.** ಶ್ರೀರಾಮಕೃಷ್ಣರು ಹೀಗೆ ಹೇಳುತ್ತಿದ್ದರು: "ಭಗವಂತನನ್ನು ಎಲ್ಲ ಮಾರ್ಗಗಳ ಮೂಲಕವೂ ಸಾಕ್ಷಾತ್ಕರಿಸಿಕೊಳ್ಳಬಹುದು. ಎಲ್ಲ ಧರ್ಮಗಳೂ ಸತ್ಯವಾದುವುಗಳೇ. ಮುಖ್ಯವಾದ ಸಂಗತಿ ಎಂದರೆ ಮಹಡಿಯನ್ನು ತಲುಪುವುದು. ಅದನ್ನು ಕಲ್ಲಿನ ಮೆಟ್ಟಿಲುಗಳ ಮೂಲಕವೋ, ಮರದ ಮೆಟ್ಟಿಲುಗಳ ಮೂಲಕವೋ, ಬೊಂಬಿನ ಮೆಟ್ಟಿಲುಗಳ ಮೂಲಕವೋ ಅಥವಾ ಹಗ್ಗದ ಮೂಲಕವೋ ನೀವು ತಲುಪಬಹುದಲ್ಲವೆ." *ಯತೋ ಮತ್ ತತೋ ಪಥ್* – ಮತಗಳೆಷ್ಟೋ ಪಥಗಳಷ್ಟು – ಶ್ರೀರಾಮಕೃಷ್ಣರ ಈ ಪ್ರಸಿದ್ಧ ಉಕ್ತಿಯ ತಾತ್ಪರ್ಯ ಇದೇ.

ಈ ವಿಷಯದಲ್ಲಿ, ಇನ್ನೊಂದು ಸಂಗತಿಯನ್ನು ಗಮನಿಸಬೇಕು. ಪರಮಸತ್ಯದೆಡೆಗೆ ಇರುವ ಸಮಂಜಸ ಮಾರ್ಗಗಳು ಎಂದು ಶ್ರೀರಾಮಕೃಷ್ಣರು ಹೇಳುವಾಗ, ಅವರು ಬೊಟ್ಟು ಮಾಡಿ ತೋರಿಸುತ್ತಿರುವುದು, ಪ್ರಮುಖವಾದ ಜಾಗತಿಕ ಧರ್ಮಗಳತ್ತ. ಕೀಳು ಆಚರಣೆಗಳಲ್ಲಿ ತೊಡಗಿಕೊಂಡಿರುವ ಕೆಲವು ಪಂಗಡಗಳು, ಮತಗಳು ಮತ್ತು ಗುಂಪುಗಳ ಅಸ್ತಿತ್ವದ ಬಗ್ಗೆ ಅವರಿಗೆ ಅರಿವಿತ್ತು. ಅದನ್ನವರು ಖಂಡಿಸಲಿಲ್ಲ; ಆದರೆ ಭಾರತದಲ್ಲಿ, ಹಿಂದಿನ ಕಾಲದ ಮನೆಗಳಲ್ಲಿದ್ದ ಚಿಕ್ಕದಾದೊಂದು ಬಾಗಿಲಿಗೆ ಅವುಗಳನ್ನು ಹೋಲಿಸುತ್ತಿದ್ದರು. ಆ ಬಾಗಿಲ ಮೂಲಕ, ಜಾಡಮಾಲಿಯವನು ಮನೆಯೊಳಗೆ ಬಂದು, ಶೌಚಾಲಯವನ್ನು ಶುಚಿಗೊಳಿಸುತ್ತಿದ್ದನು. ಪ್ರಮುಖ ವಿಶ್ವಧರ್ಮಗಳೆಂದರೆ ಹೆಬ್ಬಾಗಿಲಿದ್ದಂತೆ. ಅದರ ಮೂಲಕ ಮನೆಯನ್ನು ಯಾರಾದರೂ ಪ್ರವೇಶಿಸಬಹುದು.

೪. ಶ್ರೀರಾಮಕೃಷ್ಣರ ಧರ್ಮಸಮನ್ವಯ ತತ್ತ್ವದ ಇನ್ನೊಂದು ಸಾಮಾನ್ಯ ನಿಯಮವೆಂದರೆ, **ಇಷ್ಟನಿಷ್ಠೆ– ತಾನಾರಿಸಿಕೊಂಡಿರುವ ಇಷ್ಟದೇವತೆ ಅಥವಾ ಮಾರ್ಗದಲ್ಲಿ ನಿಷ್ಠೆ.** ಅವರು ವಿವಿಧ ಆಧ್ಯಾತ್ಮಿಕ ಪಥಗಳನ್ನು ಕ್ರಮಿಸಿದರು, ನಿಜ. ಆದರೆ, ಪ್ರತಿಯೊಬ್ಬನೂ ವಿವಿಧ ಧಾರ್ಮಿಕ ಮಾರ್ಗಗಳನ್ನು ಅನುಸರಿಸಬೇಕೆಂದೇನು ಅವರ ಇಚ್ಛೆ ಇರಲಿಲ್ಲ. ಅದಕ್ಕೆ ಬದಲಾಗಿ, ಪ್ರತಿಯೊಬ್ಬನೂ ತನ್ನ ಸ್ವಂತ ಧರ್ಮ ಅಥವಾ ಧಾರ್ಮಿಕ ಪಥದಲ್ಲಿ ನಿಷ್ಠನಾಗಿದ್ದುಕೊಂಡು, ಜೀವನದ ಪರಮಾರ್ಥವನ್ನು ಸಾಧಿಸಲು ತನ್ನ ಶಕ್ತಿಗೆ ಮೀರಿ ಪ್ರಯತ್ನಿಸಬೇಕು ಎನ್ನುವುದೇ ಅವರ ಬಯಕೆಯಾಗಿತ್ತು. ವಿವಿಧ ಮಾರ್ಗಗಳನ್ನು ಅನುಸರಿಸಿದರೆ, ಗುರಿಯನ್ನು ತಲುಪಲು ಅತ್ಯಾವಶ್ಯಕವಾದ ಏಕನಿಷ್ಠೆ ಮತ್ತು ಭಾವತೀವ್ರತೆಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಇದು ಹೇಗೆಂದರೆ, ಒಂದು ಸ್ಥಳದಲ್ಲಿ ಬಾವಿಗಾಗಿ ಅಗೆಯುವ ಬದಲು, ಹಲವಾರು ಸ್ಥಳಗಳಲ್ಲಿ ಗುಂಡಿಗಳನ್ನು ತೋಡಿದಂತೆ.

೫. ಆದರೂ, ಒಬ್ಬನು ತನ್ನ ಧರ್ಮದಲ್ಲಿ ನಿಷ್ಠನಾಗುವುದರ ಜೊತೆಜೊತೆಗೆ ಇತರ ಧರ್ಮಗಳ ಬಗ್ಗೆ ಗೌರವವನ್ನು, ಅದರ ಅನುಯಾಯಿಗಳ ಮೇಲೆ ಪ್ರೀತಿ ಮತ್ತು ಉದಾರತೆಯನ್ನು ಬೆಳೆಸಿಕೊಳ್ಳಬೇಕು. ಶ್ರೀರಾಮಕೃಷ್ಣರು ನಿಜಕ್ಕೂ ಒಪ್ಪದ ಸಂಗತಿಯೇನೆಂದರೆ, ಮೂಢನಂಬಿಕೆಗಳಿಗೆ ದಾಸನಾಗಿರುವವನ ಅಥವಾ ಧರ್ಮಾಂಧ ವ್ಯಕ್ತಿಯೊಬ್ಬನ ಅಮುಕ್ತ ಮಾನಸಿಕ ಸ್ಥಿತಿ. ಗುರುದೇವರ ಕೆಳಗಿನ ಹೇಳಿಕೆಯು ಈ ವಿಷಯದ ಮೇಲೆ ಅವರ ಅಭಿಪ್ರಾಯವನ್ನು ಸ್ಫುಟಗೊಳಿಸುತ್ತದೆ: "ಪ್ರಾಮಾಣಿಕತೆ ಮತ್ತು ವ್ಯಾಕುಲತೆಯಿಂದ ಎಲ್ಲ ಧರ್ಮಗಳಲ್ಲಿಯೂ ಸಾಕ್ಷಾತ್ಕಾರವನ್ನು ಪಡೆಯಬಹುದು. ವೈಷ್ಣವರು ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವರು. ಹಾಗೆಯೇ, ಶಾಕ್ತರು, ವೇದಾಂತಿಗಳು ಮತ್ತು ಬ್ರಹ್ಮಸಮಾಜದವರು ಎಲ್ಲರೂ ಭಗವಂತನನ್ನು ಪಡೆಯುವರು. ಮುಸಲ್ಮಾನರು, ಕ್ರೈಸ್ತರು ಕೂಡ ಅವನ ದರ್ಶನ ಗಳಿಸಿಕೊಳ್ಳುವರು. ವ್ಯಾಕುಲರೂ ಪ್ರಾಮಾಣಿಕರೂ ಆಗಿದ್ದರೆ, ಎಲ್ಲರೂ ಸಂದೇಹವಿಲ್ಲದೆ ಭಗವಂತನನ್ನು ನೋಡುವರು. 'ಕೃಷ್ಣನನ್ನು ಆರಾಧಿಸದಿದ್ದರೆ ಏನೂ ಪಡೆಯಲಾಗದು' ಅಥವಾ 'ನಮ್ಮ ದಿವ್ಯಮಾತೆಯಾದ ಕಾಳಿಯನ್ನು ಪೂಜಿಸದಿದ್ದರೆ, ಏನೂ ಗಳಿಸಲಾಗದು', ಅಥವಾ ' ಕ್ರೈಸ್ತ ಧರ್ಮವನ್ನು ಅಪ್ಪಿಕೊಳ್ಳದಿದ್ದರೆ ರಕ್ಷಣೆ ದೊರಕದು' – ಹೀಗೆ ಕೆಲವರು ಕಲಹಗಳಲ್ಲಿ ತೊಡಗಬಹುದು. ಇದು ಶುದ್ಧ ಮತಾಂಧತೆಯಷ್ಟೆ." ಶ್ರೀರಾಮಕೃಷ್ಣರು ಯಾರೊಬ್ಬರ ಶ್ರದ್ಧೆ ಅಥವಾ ಭಕ್ತಿಭಾವವನ್ನು ಪ್ರಕ್ಷುಬ್ಧಗೊಳಿಸಲು ಇಷ್ಟಪಡುತ್ತಿರಲಿಲ್ಲ. ಪ್ರತಿ ವ್ಯಕ್ತಿಯ ಶ್ರದ್ಧೆಯನ್ನು ಅವನ ಮಾರ್ಗದಲ್ಲಿಯೇ ಸಶಕ್ತಗೊಳಿಸಲು ಮತ್ತು ಅದನ್ನು ಅನುಸರಿಸಲು ಅವನನ್ನು ಉತ್ತೇಜಿಸಲು ಅವರು ಪ್ರಯತ್ನಪಟ್ಟರು. *(ಮುಂದುವರಿಯುವುದು)*

(ಮುಂದುವರಿಯುವುದು)

**ಆಕರಗಳು:**


೧. Romain Rolland, *The Life of Vivekananda and the Universal Gospel* (Kolkata: Advaita Ashrama). ಪು.೧೪೧.

೨. ಈ ಅವಧಿಯಲ್ಲಿ, ವೇದಾಂತ ತತ್ತ್ವದ ಬೋಧಕರಾದ ಹಲವಾರು ಮಹಾಪುರುಷರ ಜನ್ಮವಾಯಿತು. ಅವರನ್ನು ಆಚಾರ್ಯರು ಎಂದು ಕರೆಯುತ್ತಾರೆ. ಆಚಾರ್ಯರುಗಳು ಶಾಸ್ತ್ರಗಳನ್ನು ವಿವಿಧ ಬಗೆಗಳಲ್ಲಿ ಅರ್ಥೈಸಿದರು. ಆದರೂ ಅವರೆಲ್ಲರೂ, ಐಕ್ಯಾರ್ಥ ವಾದವೆಂಬ ವ್ಯಾಖ್ಯಾನ ನಿಯಮವನ್ನು ಪಾಲಿಸಿದರು. ಅದು 'ಶಾಸ್ತ್ರಗಳು ಒಂದೇ ತತ್ತ್ವವನ್ನು ಪ್ರತಿಪಾದಿಸುತ್ತವೆ' ಎಂದು ಹೇಳುತ್ತದೆ. ಪ್ರತಿಯೊಬ್ಬ ಆಚಾರ್ಯರೂ ತಮ್ಮ ಸಿದ್ಧಾಂತವೇ ಸರಿ ಎಂದು ಪ್ರತಿಪಾದನೆ ಮಾಡುತ್ತಿದ್ದರು. ಆದ್ದರಿಂದ, ತಮ್ಮ ಸಿದ್ಧಾಂತವನ್ನು ಮಂಡಿಸುವ ಉದ್ದೇಶದಿಂದಲೇ ಶಾಸ್ತ್ರಗಳಿಗೆ ವ್ಯಾಖ್ಯಾನಗಳನ್ನು ಬರೆದರು. ಐಕ್ಯಾರ್ಥ ವಾದದ ವಿಸ್ತೃತ ಚರ್ಚೆಗೆ ನೋಡಿ: JAB Van Buitenen, Ramanuja on the Bhagavad Gita (Delhi, Motilal Banarasidass, 1968) pp 29,32

೩. ದೃಶ್ಯತತ್ತ್ವಸಿದ್ಧಾಂತ (Phenomenology) ಎನ್ನುವುದು ಪಾಶ್ಚಾತ್ಯ ತತ್ತ್ವಶಾಸ್ತ್ರದ ಒಂದು ಸಿದ್ಧಾಂತ. ಇದರ ಸ್ಥಾಪಕ ಎಡ್‌ಮಂಡ್ ಹುಸ್ಸೆರ್ಲ್ (೧೮೫೯–೧೯೩೮). ಇದರ ಎರಡು ವಿಧಾನಗಳಾದ ನ್ಯಾಯ ನಿರ್ಧಾರಣವನ್ನು ಕೈಬಿಡುವುದು ಮತ್ತು ಉದಾರ ದೃಷ್ಟಿ – ಇವುಗಳನ್ನು ಧರ್ಮಗಳ ಅಧ್ಯಯನದಲ್ಲಿ ಅಳವಡಿಸಿದವರು, ಡಬ್ಲ್ಯು.ಬಿ. ಕ್ರಿಸ್ಟೆನ್‌ಸೆನ್ ಮತ್ತು ಜಿ. ವಾನ್ ಡೆರ್ ಲೀವ್ (WB Kristensen, G Van Der Leeuw).